ಒಂದು ಬನೀನು, ಮುಖದಲ್ಲಿ ಕುರುಚಲು ಗಡ್ಡ ಮೀಸೆಯೊಡನೆ ದೃಢಕಾಯವಾಗಿದ್ದ ಗಿರಿಯ. ಕೈಯಲ್ಲೊಂದು ಕತ್ತಿಯನ್ನೋ ಭರ್ಜಿಯನ್ನೋ ಕೊಟ್ಟರೆ ಯಾರ ಮೇಲಾದರೂ ಸರಿ ಹಿಂದು ಮುಂದು ನೋಡದೆ ಕಾಳಗಕ್ಕೆ ಬೀಳುವಂತಿದ್ದ.

ಗುಡಿಸಲೊಳಗೆ ಕೂತು ಮುದ್ದೆ ಉಣ್ಣುತ್ತಿದ್ದವನು ಕೈ ತೊಳೆದು ಬಂದು ಅಲ್ಲೇ ಇಷ್ಟು ದೂರದ ಮರದ ನೆರಳಿಗೆ ನನ್ನ ಕರೆದುಕೊಂಡು ಹೋದ. ಹುಟ್ಟಿದ ಲಾಗಾಯ್ತಿನಿಂದ ಊರೊಳಗೆ ಕೋಳಿ, ಕುರಿಮರಿ ಊರಾಚೆ ತೋಟ ತುಡಿಕೆಗಳಲ್ಲಿ ತೆಂಗು ಬಾಳೆ ಇತ್ಯಾದಿ ಕಾಯಿ ಕಸಿಗಳನ್ನು ಕದ್ದು ಮಾರುತ್ತಿದ್ದುದಾಗಿ, ಅನೇಕ ಸಂದರ್ಭಗಳಲ್ಲಿ ಸಿಕ್ಕಿ ಹಾಕಿಕೊಂಡು ಏಟು ತಿಂದದ್ದಾಗಿಯೂ ಹೇಳಿದ. ಏಟು ತಿಂದು ಮೈಗಟ್ಟಿ ಬಂದದ್ದರಿಂದ ಇನ್ನೇನು ಕಲಿತದ್ದನ್ನೇ ಮುಂದುವರೆಸುವುದು ಎಂದುಕೊಂಡ. ಗೆಣೆಕಾರನಾಗಿದ್ದ ಪಾಲಯ್ಯನಿಗೂ ಕಳ್ಳವಿದ್ಯೆಯನ್ನು ಕಲಿಸಲು ಪ್ರಯತ್ನಿಸಿದ್ದಾಗಿ, ರವಷ್ಟು ಚುರುಕು ಇಲ್ಲದವನಾದ್ದರಿಂದ ಏನು ಮಾಡಿದರೂ ಅವನು ಆ ವಿದ್ಯೆಯನ್ನು ಕಲಿಯಲೇ ಇಲ್ಲವೆಂದ. ಕೊನೆಗೆ ಪಾಲಯ್ಯ ಮಾದೇವಿಯ ಲಗ್ನವಾಗಿ ಕರಡಿ ಕಣಿವೆ ಸೇರಿದ ಮೇಲೆ ತಾನೊಬ್ಬನೇ ಆಗಿ, ಈಚೀಚೆಗೆ ಅಂದರೆ ಗೆಣೆಕಾರ ತೀರಿಕೊಂಡ ಮೇಲೆ ಕಳ್ಳತನವನ್ನು ಬಿಟ್ಟುಬಿಟ್ಟಿರುವುದಾಗಿ ಹೇಳಿದ. ಅಷ್ಟು ಹೊತ್ತಿಗೆ ಊರಗೌಡರೂ ನಾಕು ಬುದ್ಧಿಮಾತು ಹೇಳಿ ಸರ್ಕಾರದ ಸಾಲದ ಮೇಲೆ, ಶೇಕ್‌ದಾರರ ಮೂಲಕ ಎಂಟತ್ತು ಆಡಿನ ಮರಿ ಕೊಡಿಸಿದರು. ಅವುಗಳನ್ನು ಮೇಯಿಸಿಕೊಂಡು ಈಗ ಒಂದು ದಾರಿ ಹಿಡಿದಿರುವುದಾಗಿ, ಇಷ್ಟೆಲ್ಲ ಹೇಳಿ ಕೊನೆಗೆ ಚಿಕ್ಕಂದಿನಿಂದಲೂ ಗೆಣೆಕಾರನಾಗಿದ್ದ ಪಾಲಯ್ಯನ ಸಾವಿಗೆ ತಾನೇ ಹೇಗೆ ಕಾರಣನಾದದ್ದು ಎಂಬ ಪರ್ಸಂಗವನ್ನೂ ಬಿಚ್ಚಿದ–

ಹೀಗೆಯೇ ಮೊನ್ನೆ ಮೊನ್ನೆಗೆ ಹೋದ ಯುಗಾದಿಯ ಮಾರನೆಗೆ ಕಾರಯ್ಯನ ಜಾತ್ರೆಗೆ ಹೋಗಿದ್ದ ವೇಳೆ, ಸುತ್ತೆಂಟು ಊರಿಂದ ಬಂದಿದ್ದ ಜನ. ಕಾರಯ್ಯ ಸ್ವಾಮಿಯ ಗುಡ್ಡ ಕೆಳಗಿನ ಕೆರೆಯ ಸುತ್ತ ತಂತಮ್ಮ ಗಾಡಿ ಬಿಟ್ಟುಕೊಂಡು ಬಿಡಾರ ಹಾಕಿತ್ತು. ನಡು ಮಧ್ಯಾಹ್ನದ ಹೊತ್ತಿಗೆ ಗುಡ್ಡದ ಮೇಲಿಂದ ಮೆರೆದೇವರು ಬಂದು ರಥದಲ್ಲಿ ಕೂತು, ತೇರು ಎಳೆಯಲಾಯಿತು. ತೇರಿನ ಮುಂದೆ ಯಥಾಪ್ರಕಾರ ಸಂಗನವೊಡ್ಡಿನ ನಿಂಬರಾಯಿಗೌಡರು ಕತ್ತಿ ಹಿಡಿದು ರಾಜನ ಪಾರ್ಟು ಹಾಕಿದ್ದರು. ಗಿರಿಯ ಹುಲಿಯ ವೇಷ ಹಾಕಿದರೆ ಮಿಕ್ಕ ಹೈದರೆಲ್ಲ ಹೆಸರಗತ್ತೆ, ಕುರಿ, ಕುದರೆ ವೇಷ ಹಾಕಿದ್ದರು. ದೊಡ್ಡ ತಮ್ಮಯ್ಯನವರ ಗಾಡಿ ಹೊಡೆದುಕೊಂಡು ಬಂದಿದ್ದ ಪಾಲಯ್ಯ ಹಸುವಿನ ಪಾರ್ಟು ಹಾಕಿದ್ದ. ತೇರಿನ ಮುಂದೆ ಎಲ್ಲ ಆಡಿ ಕುಣಿದದ್ದಾಯಿತು.

ತೇರು ಹರಿದಾದ ಮೇಲೆ ಆಯಾ ಊರ ಗೌಡರಿಗೆ ಹರ್ಸೇವೆ ಗುಡ್ಡದ ಮೇಲಿನ ಗುಡಿಯಲ್ಲಾದರೆ, ಮಿಕ್ಕವರಿಗೆ ಕೆರೆಯ ಸುತ್ತಲ ಅವರವರ ಬಿಡಾರದಲ್ಲೇ ಆಯಿತು. ಹೊತ್ತುಪಡುವಲಲ್ಲಿ ಕಂತುವುದಕ್ಕೂ ಬಲಿಕೊಟ್ಟ ಆಡು ಕುರಿಯ ಬಾಡಿನೆಸರು ಕಡಾಯಿಯನ್ನು ಒಲೆಯಿಂದ ಇಳಿಸುವುದಕ್ಕೂ ಸರಿಹೋಯಿತು. ಬಿಡಾರಗಳಲ್ಲೆಲ್ಲ ಉಣ್ಣುವುದಕ್ಕೆ ಮೊದಲು ಈಚಲು ಸೇವನೆಯಾಯಿತು. ಕುಡಿದವರೆಲ್ಲ ಉಂಡು, ಉಂಡವರೆಲ್ಲ ಕುಣಿದು, ಕುಣಿದು ದಣಿದವರೆಲ್ಲ ಬಾಯಿಗೆ ಬಂದದ್ದ ಹಾಡುತ್ತ ಅಲ್ಲಲ್ಲೇ ಸಿಕ್ಕಿದ ಕಡೆ ನಿದ್ದೆಗೆ ಬಿದ್ದರು.

ಗಿರಿಯನೂ ಪಾಲಯ್ಯನೂ ಒಬ್ಬರಿಗೊಬ್ಬರು ತಬ್ಬಿಕೊಂಡು ಒಂದ ಮಾಡಲೆಂದು ಇತ್ತ ಬಂದರು. ಬಂದರೆ ಅಷ್ಟು ದೂರದ ಜಿಂಕೆ ಮಾಳದವರ ಬಿಡಾರದಲ್ಲಿ ಬೆಂಕಿ ಕಾಯಿಸಿಕೊಳ್ಳುತ್ತ ಕೂತಿದ್ದ ಕಾರಯ್ಯಸ್ವಾಮಿಗೆ ಬಿಟ್ಟ ಬಸವಿ ದೇವೀರಿ ಕಂಡಳು. ಉರಿಯೇಳುತ್ತಿದ್ದ ಬೆಂಕಿಯ ಮುಂದೆ ಕೂತವಳ ಮುಖ ಕೆಂಡದಂತೆ ಕೆಂಪಾಗಿ ಹೊಳೆಯುತ್ತಿತ್ತು. ಗಿರಿಯ ಅಲ್ಲೇ ಕಣ್ಣುಮುಚ್ಚುತ್ತ